Regd. No M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 244] ಸೋಮವಾರ 26—5—47 [ಬಿಡಿ ಪ್ರತಿ 6 ಪೈ

ಜಿನ್ನಾ ಮನೆಯನ್ನು ಮಾರಿ ಬಿಟ್ಟರು

—

ಭಾರತದ ಪ್ರಮುಖ ಕೈಗಾರಿಕೋದ್ಯಮಿಗಳಲ್ಲೊಬ್ಬರಾದ ಸೇಠ್ ರಾಮಕೃಷ್ಣದಾಲ್ಮಿಯಾರವರು ಬೊಂಬಾಯಿ ಮೌಂಟ್ ಪ್ಲೆಸೆಂಟ್ ರಸ್ತೆಯಲ್ಲಿರುವ ಆರಮನೆಯಂತೆ ಇಂದಚಂದ ಉಳ್ಳ ಜಿನಾಬ್ ಜಿನ್ನಾ ಸಾಹೇಬ್‌ರವರ ಗೃಹವನ್ನು ಕಲ್ಪಿತ 21 ಲಕ್ಷ ರೂಪಾಯಿಗಳಿಗೆ ಕೊಂಡರೆಂದು ವರದಿಯಾಗಿದೆ.

ಭಾರತದ ವಿಭಜನೆ

ವೈಸರಾಯರ ಭಾರತದ ವಿಭಜನೆ ಪ್ಲಾನು ಬ್ರಿಟಿಷ್ ಮಂತ್ರಿಮಂಡಲದ ಅನುಮತಿ ಪಡೆಯಿತೆಂದು ತಿಳಿದು ಬಂದಿದೆ.

ಇಬ್ಬಿಬ್ಬರು ಹೆಂಡತಿಯರು

ಜರ್ಮನಿಯು ಯುದ್ಧದಲ್ಲಿ ಗೆದ್ದಿದ್ದರೆ ನಾಜಿ ಗಂಡಸರು ಇಬ್ಬಿಬ್ಬರು ಹೆಂಡತಿಯರನ್ನು ವರಿಸಲು ಆಜ್ಞೆ ದೊರೆಯುತ್ತಿತ್ತಂತೆ

ಕಾಂಗ್ರೆಸ್ ಲೀಗು ರಾಜಿ

ಪೆಷಾವರ್ ಮೇ 21 — ಇಪಿಫ ಕೇರನು ಕಾಂಗ್ರೆಸ್ ಲೀಗಿಗೆ ರಾಜಿ ಮಾಡಿಸಲು ಪ್ರಯತ್ನಿಸುವುದಾಗಿ ತಿಳಿಸಿರುವನೆಂದು ಹೇಳಲಾಗಿದೆ

ಇಬ್ಬರು ಗಂಡಂದಿರಿಗೆ ಮದುವೆ

ಹಾಪುರದಲ್ಲಿ ಒಂದು ಹುಡುಗಿಯನ್ನು ಒಬ್ಬ ಅಡ್ವೊಕೇಟಿಗೆ ಮದುವೆ ಮಾಡಿದರು. ನಂತರ ಅದೇ ಹುಡುಗಿಯನ್ನು ಮತ್ತೊಬ್ಬನಿಗೆ ಮದುವೆ ಮಾಡಿಕೊಡಲಾಯಿತು. ಮೊದಲನೇ ಗಂಡನು ಕ್ರಿಮಿನಲ್ ಕೇಸು ಹಾಕಿ ನಂತರ ಪಂಚಾಯಿತಿ ತೀರ್ಮಾನ ನಡೆದು ಅವನಿಗೆ ಈ ಹುಡುಗಿ ದೊರೆತಳು.

ಗಂಡಂದಿರೇ ತೊಲಗಿ!

ನವದೆಹಲಿಯ ಪ್ರಗತಿ ಸ್ತ್ರೀಯರ ಸಂಘದ ಭಾಗವೊಂದು, ' ಹಿಂಸೆ ' ಅನುಭವಿಗಳಾದ ಸ್ತ್ರೀಯರನ್ನು ಕರೆದು ಗಂಡಂದಿರನ್ನು ಓಡಿಸಲು ಚಳುವಳಿ ಹೂಡಿದೆ.

ಬಳೆಗಳೇ ಗಲಭೆಗೆ ಕಾರಣವಾದವು

ಈಚಿನ ಗಲಭೆಗಳಿರಿದ ಅಸಕ್ತಿಯುತವಾದ ಸುದ್ದಿಯೊಂದನ್ನು ಲಾಹೋರ್ ಜಿಲ್ಲಾ ನ್ಯಾಯಾಧಿಶರು ಪತ್ರಿಕಾ ಪ್ರತಿನಿಧಿಗಳ ಭೇಟಿಯೊಂದರಲ್ಲಿ ತಿಳಿಸಿದ್ದಾರೆ. ಅಮೃತಸರ್‌ನ ಕೆಲವು ಗೂಂಡಾಗಳು ಲಾಹೋರ್‌ನ ಗೂಂಡಾಗಳಿಗೆ ಗಾಜಿನ ಬಳೆಗಳನ್ನು ಕಳುಹಿಸಿದರು ಎಂದು ಅವರು ಹೇಳಿದರು.

ಒಳೆಯೊಂದನ್ನು ವ್ಯಕ್ತಿಯೊಬ್ಬನಿಗೆ ಪಾರಿತೋಷಕವಾಗಿ ಕೊಡುವುದು ಪ್ರತಿಪಕ್ಷಿಯ ದೌರ್ಬಲ್ಯ ಮತ್ತು ಹೇಡಿತನವನ್ನು ಸೂಚಿಸುವಂಥಾ ಸಂಕೇತವಾಗಿರೊಂದು ಪಂಜಾಬಿ ಅಪಚಾರ. ಸರಿಗಲಭೆ ನಡೆಯುವುದರಲ್ಲಿ ಆಶ್ಚರ್ಯವೇ ?

ವಂದೇ ಮಾತರಂ

ಶಿಕ್ಷಣ ಸಂಸ್ಥಾನಗಳಲ್ಲಿ ' ವಂದೇ ಮಾತರಂ ' ಹಾಡಬಾರದೆಂಬ ಸರ್ಕಾರದ ಆಜ್ಞೆಯನ್ನು ಸಫಲ ಮಾಡುವಂತೆ ಒತ್ತಾಯ ಮಾಡಬೇಕೆಂಬ ಮುಂದಿನ ಪ್ರಾಪ್ರ. ಸಭೆಗೆ ಒಬ್ಬ ಮುಸ್ಲಿಂ ಸದಸ್ಯರು ನಿರ್ಣಯ ಕಳುಹಿಸಿದ್ದಾರೆ.

1 ನೇ ತಾ॥ ನಿಂದ ನಿಕ್ಕಲ್ ರೂಪಾಯಿ ಚಲಾವಣೆ

ವುಡ್‌ಲ್ಯಾಂಡ್ಸ್ ಮೈಸೂರು

ತಾ॥ **25-5-47** ರಿಂದ ಕಿಕ್ಕಿರಿದ **4** ನೇ ವಾರ

ಪ್ರತಿದಿನ 2 ಆಟಗಳು ಶನಿವಾರ ಮತ್ತು ಭಾನುವಾರಗಳಲ್ಲಿ ೩ - ೩೦ ಕ್ಕೆ ಮ್ಯಾಟ್ನಿ ಉಂಟು



ನಾವು ಇಬ್ಬರು

(ತಮಿಳು)

ತಾರಾಗಣ : * ಟಿ. ಆರ್. ಮಹಾಲಿಂಗಂ * ಬಿ. ಆರ್. ಪಂತಲು * ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

ಬ್ರಾಹ್ಮಣರೇ! ಏಳಿ, ಎದ್ದೇಳಿ!

ಭಾರತದೇಶದಲ್ಲಿ ಬ್ರಾಹ್ಮಣನು ಒಂದು ಸಮಯದಲ್ಲಿ ಪರಮ ಪೂಜ್ಯನು. ಆಗ ತಾನಾಗತ ವೇದಿ, ಗುರುವು, ಪುರೋಹಿತದು, ಮಂತ್ರಿ, ಸೇನಾಧಿಪತಿಯಾಗಿದ್ದನು. ರಾಜವಂಶವು ನಾಶ ಹೊಂದುವ ಸಮಯದಲ್ಲಿ ಅನುಗ್ರಹಿಸಿ ಅದನ್ನು ನಿಲ್ಲಿಸುವಂಥವನು ಆತನೇ. ಆಗ್ರಹಗೊಂಡು ಆತನು ಒಂದು ಸಮಯದಲ್ಲಿ ಸಕಲ ಕ್ಷತ್ರಲೋಕವನ್ನೂ 21 ಬಾರಿ ಪರಶುವಿನಿಂದ ನಿರ್ನಾಮ ಮಾಡಿದನು. ಶಾಂತನಾಗಿ ಕುಳಿತು ಬ್ರಹ್ಮದಂಡದ ಸಹಾಯದಿಂದ ಕ್ಷತ್ರಿಯ ಬಲಗಳನ್ನು ಸೋಲಿಸಿ ಕ್ಷತ್ರಿಯೋತ್ಪತ್ತಿಯನೇ 'ಧಿಕ್ ಬಲಂ ಕ್ಷತ್ರಿಯ ಬಲಂ | ಬ್ರಹ್ಮತೇಜೋಬಲಂ ಬಲಂ' ಎಂದು ಸುಡಿಯುವಂತೆ ಮಾಡಿದನು. ಇಂದ್ರಪದವಿಯನ್ನು ಅಧಿಷ್ಠಿಸಿದವನನ್ನು ಕೂಡಾ ಹಾಗೆ ಮಾಡಿದನು. ವಿಂಧ್ಯೆಯನ್ನು ಅಣಗಿಸಿ ಸಮುದ್ರವನ್ನು ಅಪೋಶನ ರೂಪದಲ್ಲಿ ಹೀರಿದನು. ಪುರಾಣ ಯುಗದ ಪಾತ್ರ ಅಂತಿಂಥಿ 2 ಸಾವಿರ ವರ್ಷಗಳ ಹಿಂದೆ ಅವನು ರಾಜಾಪವೂಹನನನ್ನು ಸಹಿಸಲಾರದೆ, ದಿಕ್ಕಿಲ್ಲದೆ ತಿರುಗುತ್ತಿದ್ದ ಮೌರ್ಯನನ್ನು ಮೂರ್ಧಾಭಿಷಿಕ್ತನನ್ನಾಗಿ ಮಾಡಿದನು. ಆಂದಿಗೂ ಇಂದಿಗೂ ಸಕಲ ರಾಜನೀತಿಗೂ ಅವನು ಎಳೆದದ್ದೇ ಗೆರೆ. ಅವನು ಇಟ್ಟಿದ್ದೇ ಭಿಕ್ಷೆ.

ಆದರೆ ಕಾಲವು ಬದಲಾಯಿಸಿದೆ. ಆತನು ಕ್ರಮವಾಗಿ ಸರ್ಕಾರದ ಭಂಟನಾದನು. ದೇಶವು ದಾಸ್ಯದ ಬಲೆಗೆ ಬಿದ್ದಾಗ ಆತನೂ ಗುಲಾಮನಾದನು. ಇಂದು ಆತನ ಸ್ಥಿತಿಯು ಅಧೋಗತಿಯಾಗಿದೆ.

ಆತನ ಬುದ್ಧಿ ಕುಶಲತೆಯು ಕಡಿಮೆಯಾಗಲಿಲ್ಲ; ಕಷ್ಟ ಸಹಿಷ್ಣುತಾ ಶಕ್ತಿಯು ಕುಗ್ಗಲಿಲ್ಲ; ಆದರೆ ದಾಸ್ಯಕ್ಕೆ ಅಭ್ಯಾಸವನ್ನು ಹೊಂದಿದನು. ತನ್ನ ಪ್ರತಿಭೆಗೂ, ಪಾಂಡಿತ್ಯಕ್ಕೂ, ಶಕ್ತಿಯುಕ್ತಿಗಳಿಗೂ ದಾಸ್ಯನೇ ಪರಮಾವಧಿಯೆಂದೆಂದು ಕೊಂಡನು. 'ಉದ್ಯೋಗಂ ಪುರುಷ ಲಕ್ಷಣಂ' ಎಂದು ಅದಕ್ಕೆ ದೊಡ್ಡ ಹೆಸರನ್ನಿಟ್ಟನು. ಪ್ರತಿಭೆಯುಳ್ಳ ಆತನನ್ನು ವಿಚಾರಿಸಲಾಗದವನು, ಶಕ್ತಿಯುಕ್ತಿಗಳಳ್ಳಿ ಆತನನ್ನು ಎದುರಿಸಲಳಗದವನು, ನ್ಯಾಯವಾಗಿಯೂ ಸಹಜವಾಗಿಯೂ ಇಂದು ಎದುರಿಸುತ್ತಿದ್ದಾನೆ. ಎದುರಿಸಿದರೂ ರಂಗದಿಂದಿಸುತ್ತಿದ್ದಾನೆ.

ದುಷ್ಕಾಲವು ಬರಲಿರುವುದೆಂದು ಬ್ರಾಹ್ಮಣನು ಮೊದಲೇ ಗ್ರಹಿಸದೆ ಹೋಗಲಿಲ್ಲ. ಚಾಕಚಕ್ಯತೆಯೊಂದಿಗೆ ವಿಶಾಲಭಾವೋಪೇತನಾದನು. ಹರಿಜನರಿಗೆ ದೇವಾಲಯ ಪ್ರವೇಶನನ್ನು ಕಲ್ಪಿಸಿದನು. ಕೊನೆಗೆ ಆತನೊಂದಿಗೆ ಭಾವಿಧವ್ಯಕ್ಕೂ ಒಪ್ಪಿಗೆಯಿತ್ತನು. ಆದರೂ ಪೋಟಿಯು ತಪ್ಪಲಿಲ್ಲ. ಪೋಟಿಗೆ ನಿಲ್ಲಬಲ್ಲವನಾದುದರಿಂದ ಅದು ದ್ವೇಷವಾಗಿ ಪರಿಣಮಿಸಿತು.

ಬ್ರಾಹ್ಮಣನಿಗೆ ಕೆಲಸಗಳನ್ನು ಇಷ್ಟಕ್ಕಿಂತ ಹೆಚ್ಚು ಕೊಡಕೂಡದೆಂದು ನಿರ್ಣಯಿಸಿದರು. ಕಾಲೇಜುಗಳಲ್ಲಿ ಇಷ್ಟೇ ಸ್ಥಳವೆಂದೂ ನಿರ್ಣಯಿಸಿದರು ಸಾಂಕೇತಿಕ ವಿದ್ಯೆಯು ಆತನಿಗೆ ದೂರವಾಯಿತು. ಓದಿದವನಿಗೂ ಉದ್ಯೋಗವಿಲ್ಲವಷ್ಟೆ! ಸ್ವತಂತ್ರವಾಗಿ ಯಾವ ವೃತ್ತಿಯನ್ನು ಅವಲಂಬಿಸಲೆಳಿಸಿದರೂ ಅಲ್ಲಿಯೂ ಪೋಟಿಯೇ. ಯಾವ ಕುಲವರಿಗೆ ಅವರ ಕುಲದ ವಕೀಲನನ್ನು ಕೊನೆಗೆ ಜೂನಿಯರ್‌ನನ್ನಾದರೂ ಹುಡುಕಿ ಇಟ್ಟುಕೊಳ್ಳುವ ಪದ್ಧತಿಯಾಗಿದೆ. ಯಾವ ಕುಲದವನು ಆ ಕುಲದ ಡಾಕ್ಟರನನ್ನು ನಂಬಿ ಪ್ರಾಣವನ್ನು ಆತನ ಕೈಯಲ್ಲಿಡುತ್ತಾನೆ. ಕೃಷಿ, ವರ್ತಕ, ವಾಣಿಜ್ಯ ದಿಗಳನ್ನು ಮಾಡಲೆಳಿಸಿದರೂ ಅಲ್ಲೆಲ್ಲಾ ಅಪರ ಆಟವೇ.

ಆತನು ವಂಶಪರಂಪರೆಯಾಗಿ ಮಾನಸಪ ಸೇವಾ ಪರಾಯಣನು. ಸಂಸ್ಥದಲ್ಲಿ ಮುಂಜರಿದು, ಕುರಿಗಳನ್ನು ನಡೆಸುವಂತೆ ಅದನ್ನು ದುರ್ಗಗು ಪ್ರಾಂತ್ಯಗಳಿಗೆ ನಡೆಸಿ, ಅಸಾಧ್ಯವನ್ನು ಸಾಧ್ಯವಾಗಿ ಮಾಡಬಲ್ಲ ಧೀರನು. ಪ್ರಜಾನಾಯಕನಾಗಿ ಸ್ವಾತಂತ್ರ್ಯ ಬೋಧೆಯನ್ನು ಮಾಡಿದನು, ರಾಜರ ಆಗ್ರಹಕ್ಕೆ ಗುರಿಯಾಗಿ ಅನೇಕ ತೊಂದರೆಗಳಿಗೆ ಒಳಗಾದನು. ತ್ಯಾಗಪರಾಯಣನಾಗಿ ಪ್ರಜಾ ಸಾಮಾನ್ಯಂ ಚಿತ್ತವನ್ನು ವಿಕಸಿತಗೊಳಿಸಿದನು 100 ವರ್ಷಗಳ ಕಾಲ ರಕ್ತ ಪ್ರವಾಹದಲ್ಲಿ ಈಜಾಡಿದರೂ ಸಿಗಲಾರದ ರಾಜಕೀಯ ಹಕ್ಕುಗಳನ್ನು ಪ್ರಜೆಗಳಿಗೆ ಹಸ್ತಗತ ಮಾಡಿದನು. ಹಾಲು ಅರುವ ಸಮಯಕ್ಕೆ ಭಾಗಸ್ವಾಮಿಗಳು ಸುತ್ತುವರೆದರು. ಭಾಗವನು ಹಾಚಿ ಕೊಡಲು ಆತನಿಗೆ ಅಭ್ಯಂತರವಿಲ್ಲ. 'ನೀನು ತೊಲಗು, ನಾವು ಅನುಭವಿಸುತ್ತೇವೆ' ಎಂದು ಅವರು ಹೇಳುತ್ತಿರುವರು. ಈ ಬಗೆಯುಲ್ಲಿ ವೈಜ್ಞಾನಿಕನಾಗಿಯೂ, ಸಾಂಘಿಕನಾಗಿಯೂ, ರಾಜಕೀಯವಾಗಿಯೂ ಬ್ರಾಹ್ಮಣನು ಇಂದು ಅಸ್ಪೃಶ್ಯನು ಆಗಿದ್ದಾನೆ. ಅದುದರಿಂದ ಅವನು ಅಕ್ಲೇಶಪೂರಿತನಾಗಿದ್ದಾನೆ.

(ತಿ)

ತಿರುಪತಿ ದೇವಾಲಯಕ್ಕೆ ಹರಿಜನ ಪ್ರವೇಶ ಸಂಬಂಧದ ಮೊಖದ್ದಮೆಯಲ್ಲಿ ಹೈಕೋರ್ಟಿನವರು ಇಂಜಂಕ್ಷನ್ ಕೊಟ್ಟದ್ದಾರೆ

ಇದರ ಮೇಲೆ ಫೆಡರಲ್ ಕೋರ್ಟಿಗೆ ಅಪೀಲು ಮಾಡಲು ಅಪ್ಪಣೆ ಕೊಡಲ್ಪಡಲಿಲ್ಲ. (ಮೇ 21)

o o

ಇಂಡಿಯಾ ಕಾಫೀ ಬೋರ್ಡು

ಈ ಸಂಸ್ಥೆಯು ಮಾರ್ಚ್ ಮಾಹೆಯ ಪತ್ರಿಕೆಯಲ್ಲಿ ಹೀಗೆ ಹೇಳಿದೆ—

1 ಕಾಫಿಯನ್ನು ನಿಂತುಕೊಂಡು ಕುಡಿದಲ್ಲಿ ಅದು ದುರ್ದೈವ ಸೂಚಕವೆಂದು ಡೊಮಿನಿಯನ್ ರಿಪಬ್ಲಿಕ್‌ನಲ್ಲಿ ಭಾವಿಸಲ್ಪಟ್ಟಿರುವುದು.

2 ಒಳ್ಳೇ ಕಾಫಿಯು ಪ್ರಥಮ ಚುಂಬನದಂತೆ ಸಿಹಿಯಾಗಿರಬೇಕು, ತೃತೀಯ ಚುಂಬನದಂತೆ ಶಕ್ತಿಯುತವಾಗಿರಬೇಕು, ನರಕದಂತೆ ಬಿಸಿಯಾಗಿರಬೇಕು (Good Coffee should be 'Sweet as the first kiss, strong as the third kiss, hot as hell')

——

ನವದೆಹಲಿ, ಮೇ 20 — ಭಾರತದ ಎಂಡು ಡೊಮಿನಿಯನ್ ಮಂತ್ರಿಮಂಡಲಗಳೂ ಒಬ್ಬ ಗೌರ್ನರ್ ಜನರಲ್ ಕೈಕೆಳಗೆ ಸ್ಥಾಪಿಸಲು ತತ್ಕಾಲ ಸರ್ಕಾರದ ಸೂಚನೆಯೆಂದು ಕೇಳಲಾಗಿದೆ.

ವಿವಿಧ ವರ್ತಮಾನ

ಕಲ್ಕತ್ತಾ, ಮೇ 20 — ಮೇ 10 ರಿಂದ ತಾತ್ಕಾಲಿಕವಾಗಿ ಸಕ್ಕರೆ ಸರಬರಾಜು ಸುಮಾರು ಸಾವಿರ ಮಿಠಾಯಿ ಅಂಗಡಿಗಳಿಗೆತಪ್ಪಿಸಲಾಗಿ ಅವೆಲ್ಲಾ ಜಾಗಿಲು ಮುಚ್ಚಿವೆ.

ಮೆಂಡ್ರಿಡ್ ಮೇ 19 — ಬಾರ್ಸಿಲೊನಾದ ಮಿಲಟರಿ ಗೌರ್ನರುಗಳ ಆಫೀಸಿಗೆ ಜ | ಫ್ರಾಂಕೋ ಭೇಟಿ ಕೊಡುವ ಸಮಯದಲ್ಲಿ ಒಂದು ಬಾಂಬು ಸ್ಫೋಟವಾಯಿತು. ಸಾವು ನೋವು ಏನೂ ಆಗಿಲ್ಲ. ಕಟ್ಟಡಕ್ಕೆ ಸ್ವಲ್ಪ ಏಟು ಬಿದ್ದಿದೆ.

ರಾಜಮಹೇಂದ್ರಿ ಮೇ 18 — ಆದಾಯ ಮಂತ್ರಿ ಶ್ರೀ ಕಾಲಾ ವೆಂಕಟರಾಯರು ಮದರಾಸಿನಿಂದ ಅನುಲಾಪುರಕ್ಕೆ ಹೊಟು ಇಲ್ಲಿಗೆ ಬಂದಾಗ ಅವು ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಬೈಗಳ ಸುರಿಮಳೆ ಜೋಡು ಕಲ್ಲು ಎಸೆಯುಲ್ಪಟ್ಟವು.

ಲಂಡನ್ ಮೇ 18 — ತನ್ನ ರಾಜ್ಯದಲ್ಲಿ ಹಕ್ಕು ಸಾವಿರ ಬ್ರಿಟೀಷ್ ಸೈನಿಕರನ್ನಿಡಬೇಕೆಂದು ನಿಜಾಂರವರು ಪ್ರಾರ್ಥಿಸಿದರೆಂದೂ ಅದು ನಿರಾಕರಿಸಲ್ಪಟ್ಟಿತೆಂದೂ ಹೇಳಲಾಗಿದೆ. ಸರ್ ವಿಜಿರ್ಯಾರರವರು ಹೈದ್ರಾಬಾದು ಮಂತ್ರಿ ಪದವಿ ಬಿಟ್ಟಿರುವುದರಿಂದ ಹೈದರಾಬಾದು ಪಾಕಿಸ್ತಾನಕ್ಕೆ ಸೇರಲು ನಿಜಾಮರ ಇಚ್ಛೆ ಆಗಿದೆ ಎಂದು ಹೇಳಲಾಗಿದೆ.

ಶ್ರೀ 'ಓಂ' ಗುರುತಿನ ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೂ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ತಾ॥ 26-5-47 ॥ಶ್ರೀ॥ ನಂ. 37

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಪ್ರಬೋಧದ ಸಸಾಮ್ಯಿಕ ಪ್ರಕಟನಮಾಲೆ

ಸಂಪಾದಕ– ಗುಂಡ್ಕಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾರತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಸನ್ಮಾರ್ಗ

ಂ — ಂ

12-5-47 ರಿಂದ (ಮುಂದುವರಿದುದು.)

ವಾಲ — (ತನ್ನೊಳಗೇ) ಊಂ! ಇದೇನು? ಮೃತ್ಯುವನ್ನು ಸಂತೋಷದಿಂದ ಎರಡೂ ಕೈನೀಡಿ ಆಲಿಂಗಿಸಿಕೊಳ್ಳುವ ಈ ಬ್ರಾಹ್ಮಣನಾರು? ದಸ್ಯುಗಳ ಹೆಸರನ್ನು ಕೇಳುತ್ತಲೇ ನಡುಗಿ ಹೋಗುವ ಅಳುವ ಬೇಡುವ ಮತ್ತು ನ್ಯೆವರಿತು ಹೋಗುವ ಸಾಮಾನ್ಯ ಪ್ರಾಣಿಗಳೆಲ್ಲಿ, ದಸ್ಯುರಾಜನ ಮುಖದಿಂದ ಕಠೋರತಮವಾದ "ಮೃತ್ಯುವಿನ ಆಜ್ಞೆ"ಯನ್ನು ಕೇಳಿ ಎದುರುಗಡೆ ಪ್ರತ್ಯಕ್ಷ ಅಗ್ನಿ ಕುಂಡವು ಧಗಧಗಿಸುತ್ತಿರುವುದನ್ನು ನೋಡಿಯೂ ನಗುತ್ತಾ ಅದನ್ನು ಸ್ವಾಗತೀಕರಿಸುವ ಬ್ರಾಹ್ಮಣನೆಲ್ಲಿ! ಇಲ್ಲ, ಇವನು ಸಾಧಾರಣ ಬ್ರಾಹ್ಮಣನಲ್ಲ ಆದರೆ ಕದಾಚಿತ್ ಇವನು ಮೋಸಮಾಡಲು ಇಚ್ಛಿಸುವನೋ, ವಾಲನು ಮೋಸಕ್ಕೊಳಗಾಗನು. (ಪ್ರಕಟವಾಗಿ) ಸೋನಾ ಹಿಡಿ ಇವನನ್ನು.

(ಸೋಸನೂ ಅರ್ನಿಯೂ ಹಿಡಿದು ಕೊಳ್ಳಲಿಚ್ಛಿಸುವರು ಆದರೆ ನಾರದನ ಶರೀರವನ್ನು ಸ್ಪರ್ಶಿಸಲಾರದಾಗುವರು ಅಂಜಿ ಹಿಂಜರಿಯುವರು.]

ವಾಲ — ಏಕೆ, ಏನಾಯಿತು?

ಸೋಸ — ದೇವ, ಇವನು ಬ್ರಾಹ್ಮಣನಲ್ಲ, ಯಾವುದೋ ಭೂತವು ಇವನ ಶರೀರದಿಂದ ಹೆಂಕಿ ಹೊರಡುತ್ತಿದೆ ವಂತಿದೆ ನಾವೀತನನ್ನು ಹಿಡಿದುಕೊಳ್ಳಲಸಮರ್ಥರು.

ವಾಲ — ಊಂ! (ತನ್ನೊಳಗೆ) ಅಲ್ಲ, ಇದು ಮೋಸವಲ್ಲ. ಸತ್ಯ. ಬ್ರಾಹ್ಮಣನು ಒಬ್ಬ ಅಸಾಧಾರಣ ವ್ಯಕ್ತಿ ಯೆಂದು ತೋರುತ್ತದೆ. ಇವನಲ್ಲಿ ಹೆಚ್ಚಿನ ಮೈರ ಕಟ್ಟಿ ಕೊಳ್ಳುವುದು ಸರಿಯಲ್ಲ (ಪ್ರಕಟ) ಬ್ರಾಹ್ಮಣಾ ನೀನು ಮುಕ್ತನಾಗಿರುವೆ ಎಲ್ಲಿಗೆ ಬೇಕಾದರೂ ಹೋಗಬಹುದು. ಆದರೆ ಮೊದಲು ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡು.

ನಾರದ — ಏನು?

ವಾಲ — ನೀನು ಮೃತ್ಯುವಿಗೆ ಹೆದರುವುದಿಲ್ಲವೆ?

ನಾರದ — ಮೃತ್ಯುವು ನನಗೇನೂ ಕೆಡಕು ಮಾಡಲಾರದು.

ವಾಲ — ಅದು ಹೇಗೆ?

ನಾರದ — ದಸ್ಯುರಾಜ, ಇದರ ಉತ್ತರವನ್ನು ತಿಳಿಯುವುದು ನಿನ್ನ ಮಟ್ಟಿಗೆ ಸುಲಭವಲ್ಲ.

ವಾಲ — ಆದರೆ ನಾನು ತಿಳಿಯಬಯಸುತ್ತೇನೆ.

ನಾರದ — ನೀನು ನನ್ನ ಪ್ರಶ್ನೆಗಳಿಗೆ ಉತ್ತರ ಕೊಡು. ಆಗ ನೀನೇ ತಿಳಿದುಕೊಳ್ಳುವೆ.

ವಾಲ— ಕೇಳು.

ನಾರದ — ನೀನು ಇಷ್ಟು ಧನ ಸಂಗ್ರಹವನ್ನು ಏಕೆ ಮಾಡುತ್ತೀ?

ವಾಲ— ನನ್ನ ಮತ್ತು ನನ್ನ ಸಂಬಂಧೀಕರ ಸುಖಕ್ಕಾಗಿ.

ನಾರದ— ಹಾಗಾದರೆ ಕದಾಚಿತ್ ಈ ಕ್ರೂರ ಕರ್ಮಗಳ ಫಲವನ್ನು ಭೋಗಿಸುವುದರಲ್ಲಿಯೂ ನಿನ್ನ ಸಂಬಂಧಿಕರು ನೆರವಾಗುವರೇ?

ವಾಲ — ಅವಶ್ಯವಾಗಿ.

ನಾರದ — ದಸ್ಯುರಾಜ ಇದು ನಿನ್ನ ಭ್ರಮೆ, ಸ್ವಲ್ಪ ಕೇಳಿ ಕೊಂಡು ಬಾ ನೋಡೋಣ. (ವಾಲನು ಹೋಗುವನು) (ತನ್ನೊಳಗೆ) ಭಗವಂ! ಇಂದೊಬ್ಬ ಪತಿತನನ್ನು ಪಾವನ ಮಾಡುವ ಸುಸಂದರ್ಭವನ್ನು ನೀಡಿತ್ತೆ. ನಾಮಗ ಪ್ರದರ್ಶನದ ಇಂತಹ ಸುಂದರ ಕ್ಷಣವನ್ನು ಯಾರು ತಪ್ಪಿಸಿ ಕೊಳ್ಳುವರು?

ಸೋನ — (ಕೈ ಜೋಡಿಸಿ) ಬ್ರಾಹ್ಮಣ! ನಾನೂ ಒಂದು ಪ್ರಶ್ನೆ ಕೇಳಲಪೇಕ್ಷಿಸುವೆ.

ನಾರದ — ಕೇಳು,

ಸೋನ — ನಿನ್ನ ಶರೀರದಿಂದ ಬೆಂಕಿಯು ಏಕೆ ಹೊಂಡುತ್ತಿದೆ?

ನಾರದ — ಇದಕ್ಕುತ್ತರವನ್ನು ನಿನಗೆ ಕೆಲ ದಿನಗಳ ಅನಂತರ ಸ್ವಯಂ ದಸ್ಯುರಾಜನು ಕೊಡುವನು.

ವಾಲ — (ಪ್ರವೇಶಿಸಿ) ಬ್ರಾಹ್ಮಣ! ಬ್ರಾಹ್ಮಣ! ನೀನು ನುಡಿದುದು ನಿಜ. ನನ್ನ ಪಾಪಗಳ ಫಲವನ್ನು ಭೋಗಿಸಲಿಕ್ಕೆ ಯಾರೂ ಜತೆಗಿಲ್ಲ. ಫಲ ಭೋಗಿಸುವ ಹೆಸರು ಕೇಳುತ್ತಲೇ ಪತ್ನಿಯು ತಿರಸ್ಕರಿಸಿದಳು, ಭ್ರಾತೃಗಳು ಗವನವನ್ನೇ ಕೊಡಲಿಲ್ಲ. ಮಕ್ಕಳು ಕಣ್ಣೆದುರಿಗೆ ಸಿಕ್ಕಲಿಲ್ಲ. ಸರಿ ಇನ್ನು ಒಬ್ಬನೇ ಏಕಾಕಿಯಾಗಿ ವಾಲನು ಸತ್ಕರ್ಮ ಬಳಿಕ ಫಲವನ್ನು ಭೋಗಿಸುವನು ಆಹಾ!

ನಂದೆ — [ಪ್ರವೇಶಿಸಿ] ಇಲ್ಲಣ್ಣಾ, ನಾಗು ನಿನ್ನ ಜತೆಗೆ ಪಾಪಗಳ ಫಲವನ್ನು ಭೋಗಿಸಲು ನರಕಕ್ಕೆ ಬರುವೆ.

ವಾಲ — ನೀನು? ನಂದಾ, ನೀನೇ ನನ್ನ ಜತೆಗೆ ಬರುವೆಯಾ? ಏಕೆ?

ನಂದ — ದಸ್ಯುರಾಜ, ಸಾವಧಾನ ನಾನು. ನಂದೆಗೆ ಮೃತ್ಯು ಭಯವಿಲ್ಲ ಅವಳು ನಿನ್ನನ್ನು ಭಯಪಡುವ ಸಲುವಾಗಿ ನಿನ್ನೊಟ್ಟಿಗೆ ಬರುವಳು.

ವಾಲ — ನಂದಾ! ನಿನಗೆ ಮೃತ್ಯುವಿನ ಭಯವಿಲ್ಲ, ಈ ಬ್ರಾಹ್ಮಣನಿಗೆ ಮೃತ್ಯುವಿನ ಭಯವಿಲ್ಲ! ಮತ್ತು ನನಗೆ? ನನ್ನ ಮೃತ್ಯುವಾದರೋ ಕಣ್ಣರಳಿಸಿ ಅರಳಿಸಿ ನನ್ನ ಕಡೆಗೆ ನೋಡುತ್ತಿದೆ ನನ್ನನ್ನು ನುಂಗಿ ಬಿಡುವುದೋ ಎಂಬಂತಿದೆ. ಇನ್ನು ಅನಂತರ ಪಾಪಗಳ ಫಲ! ಅಯ್ಯೋ!

ನಾರದ — ದಸ್ಯುರಾಜ! ಹುಚ್ಚನಾಗಬೇಡ, ನೀನೂ ಕೂಡ ಈ ಪಾಪಗಳಿಂದ ತಪ್ಪಿಸಿಕೊಳ್ಳಬಹುದು, ಮೃತ್ಯುವನ್ನು ಒದೆದೊಗೆಯಬಹುದು.

ನಂದೆ — ಹೌದಣ್ಣಾ ನೀನೀ ಮಹಾನುಭಾವರ ಚರಣಗಳಿಗೆ ವಂದಿಸು ಇದರಿಂದ ನೀನೂ ರಕ್ಷಿಸಿಕೊಳ್ಳಬಹುದು ಮತ್ತೆಲ್ಲರನ್ನೂ ರಕ್ಷಿಸಬಹುದು.

ವಾಲ — [ಸಾಷ್ಟಾಂಗ ದಂಡವತ್ ನಮಸ್ಕರಿಸಿ ಕಣ್ಣಲ್ಲಿ ನೀರು ಸುರಿಸುತ್ತಾ] ವಿಪ್ರವರ ಈಗ ಬೇಕಾದರೆ ಶಿಕ್ಷಿಸು ಇಲ್ಲವೆ ಬದಿಗೊತ್ತು.

ನಾರದ — ಎದ್ದೇಳು ದಸ್ಯುರಾಜ ಎದ್ದೇಳು! ನಿನ್ನನ್ನು ಭಗವಂತನ ಪತಿತ ಪಾವನವಾದ ನಾಮವು ರಕ್ಷಿಸುವುದು, ಹೇಳು ರಾಽಽಮ ರಾಽಽಮ ರಾಽಽಮ!

ವಾಲ — ಇದನ್ನು ನಾನು! ನಾನಿದನ್ನು ಹೇಳಲೆ! ಇದು ನನ್ನನ್ನು ರಕ್ಷಿಸುವುದೇ?

ನಾರದ — ಹೌದು ಹೇಳು ರಾಽಽಮ.

ವಾಲ — ರ್ಯಽಽಮ ಆಽಽಮ ಮುಂದೆ? ಮರೆತೆ ಈ ಎರಡಕ್ಷರವನ್ನು ಮರೆತು ಬಿಟ್ಟೆ.

ನಾರದ — ರಾಽಽಮ ರಾಽಽಮ.

ವಾಲ — ಆಽಽಮ ಆಽಽಮ ಇಲ್ಲ. ವಾಲನು ಈ ಅಕ್ಷರಗಳನ್ನು ಉಚ್ಚರಿಸಲಾರನು, ಹಾಗಾದರೆ? ಹಾಗಾದರೆ ವಾಲಾ! ಹಾಗಾದರೆ ಹೋಗು ನರಕಕ್ಕೆ ಹೋಗು. ಅಲ್ಲಿಯೇ ನಿನಗೆ ಸ್ವಾಗತವಾಗುವುದು: ಅಲ್ಲಿಯೇ ನಿನಗೆ ಉದ್ಧಾರವಾಗುವುದು ಇನ್ನು ನನ್ನನ್ನು ರಕ್ಷಿಸಲಿಕ್ಕೆ ಯಾರು ಸಮರ್ಥರಿಲ್ಲ

ಶ್ರೀ ದ್ವಾರಕಾ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶಂಕರಾಚಾರ್ಯಸ್ವಾಮಿ ಶ್ರೀ ಅಭಿನವ ಸಚ್ಚಿದಾನಂದ ತೀರ್ಥಜೀ ಮಹಾರಾಜರವರು.

——

ಶಿವಮೊಗ್ಗಾದಲ್ಲಿ ಈ ವಾರ ನಡೆಯುವ ಪಂಡಿತ ಮಹಾ ಸಮ್ಮೇಳನದಲ್ಲೂ ಮತ್ತು ಅಖಿಲ ಕರ್ನಾಟಕ ಸನಾತನ ಧರ್ಮ ಸಮ್ಮೇಳನದಲ್ಲೂ ಅಧ್ಯಕ್ಷತೆ ವಹಿಸಲು ದಯವಿಟ್ಟು ಒಪ್ಪಿದ್ದಾರೆ.

ಸನಾತನಿಗಳ ಅಪೂರ್ವ ವಿಜಯ

— —

ಪ್ರಚಾರಕ—ರಾಜಾ ಎಸ್. ಗುರುರಾಜಾಚಾರ್ಯ. ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ತಿರುಪತಿಯಲ್ಲಿ ಹರಿಜನ ಪ್ರವೇಶಕ್ಕೆ ತಮ್ಮ ಒಪ್ಪಿಗೆ ಕೊಟ್ಟ ದೇವಸ್ಥಾನ ಕಮಿಟಿಯ ತೀರ್ಮಾನವನ್ನು ವಿರೋಧಿಸಿ ಶ್ರೀ ಜಗದ್ಗುರು ರಾಘವೇಂದ್ರ ಸ್ವಾಮಿಗಳವರ ಮಠಾಧೀಶರುಗಳ ವಿಶೇಷ ಸಹಾಯ ಮತ್ತು ಅಪ್ಪಣೆ ಮೇರೆಗೆ ಕಲ್ಕತ್ತಾದ ಮಹಾಮಹೋಪಾಧ್ಯಾಯ ಶ್ರೀ ಅನಂತಕೃಷ್ಣಶಾಸ್ತ್ರಿಗಳವರು ಚಿತ್ತೂರು ಕೋರ್ಟಿನಲ್ಲಿ ದಾವಾ ದಾಖಲ್ಮಾಡಿ ಮದರಾಸು ಹೈ ಕೋರ್ಟಿನಲ್ಲಿ ಇಂಜಂಕ್ಷನ್ ಅರ್ಜಿ ಕೊಟ್ಟದ್ದು ವಿಚಾರಣೆ ನಡೆದು ತಾ || 21-5-47 ನೇ ದಿವಸ ಜಸ್ಟಿಸ್ ಸಹಬಂದ್ದೀನರು, ಕೋರ್ಟಿನಲ್ಲಿ ಈ ಕೇಸು ತೀರ್ಮಾನವಾಗುವವರೆಗೂ ದೇವಸ್ಥಾನಕ್ಕೆ ಹರಿಜನರನ್ನು ಬಿಡಕೂಡದೆಂದು ತೀರ್ಮಾನಕೊಟ್ಟದ್ದಾರೆ. ಇದು ಸನಾತನಿಗಳ ಪ್ರಥಮ ವಿಜಯ.

ಇದರಂತೆ ಪಂಡರಪುರದಲ್ಲಿ ಪ್ರವೇಶಕ್ಕಾಗಿ ಉಪವಾಸಮಾಡಿದ ಶ್ರೀ ಸಾನೇ ಗುರೂಜಿಯವರ ಉಪವಾಸಕ್ಕೆ ಪ್ರತಿಯಾಗಿ ಹನ್ನೊಂದು ದಿನ ಹನ್ನೊಂದು ಜನ ಸನಾತನಿಗಳು ಶ್ರೀ ಕ್ಷೀರೇ ಮಹಾಶಯರೊಡನೆ (ಅ. ಭಾ. ವರ್ಣಾಶ್ರಮ ಸ್ವರಾಜ್ಯ ಸಂಘ) ಉಪವಾಸ ಮಾಡಿದ್ದರಿಂದ ಬಡವೇ ಸಂಘದವರು ಕೋರ್ಟಿನಲ್ಲಿ ಹರಿಜನ ಪ್ರವೇಶ ಕೂಡದೆಂದು ದಾವಾದಾಖಲ್ ಮಾಡಿದ್ದರಲ್ಲದೇ ಬಿಡುವುದಿಲ್ಲವೆಂಬ ಭರವಸೆ ಕೊಟ್ಟಿದ್ದಾರೆ. ಇದರಿಂದ ಪ್ರಸನ್ನರಾದ ಸನಾತನಿಗಳು ಉಪವಾಸವನ್ನು ನಿಲ್ಲಿಸಿದ್ದಾರೆ ಹೀಗೆ ಭಾರತದ ಪ್ರಮುಖ ಎರಡು ಕೇಂದ್ರಗಳಲ್ಲಿ ಸನಾತನಿಗಳಿಗೆ ಅಪೂರ್ವ ವಿಜಯವು ದೊರಕಿರುತ್ತದೆ.

ಎಂದಿಗಿದ್ದರೂ ಸತ್ಯಕ್ಕೆ ಜಯವೆಂಬುದು ಇದರಿಂದ ಸಿದ್ಧವಾದಂತಾಯಿತು.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆಸಹಿತ ಸೇರಿ 1--12--0

ಈ ವಾರದ ಭವಿಷ್ಯ

(ಓರಿ ಜ್ಯೋತಿಷ್ಯರಿಂದ)

ಮೇಷ — ಆರೋಗ್ಯಕ್ಕೆ ಧಕ್ಕೆ ವ್ಯಯ ಅಧಿಕ ಪರೋಪಕಾರ್ಯದಲ್ಲಿ ತತ್ಪರತೆ.

ವೃಷಭ — ನಿದ್ರಾ ಭಂಗ ಪ್ರಸಂಗಗಳು ಒದಗುತ್ತವೆ ಚೋರ ಭಯ ಅಗ್ನಿ ಭಯ ಶತ್ರು ಭಯ ಸತನ ಭಯ ದುರ್ವಾರ್ತೆಯನ್ನು ಕೇಳುವಿಕೆ ಸಂತಾಪಗಳು ಕಾಣ ಬರುತ್ತವೆ

ಮಿಥುನ — ಪದಾರ್ಥ ನಷ್ಟ ತೊಂದರೆಗಳು ಚಿಂತೆ ವ್ಯವಹಾರದಲ್ಲಿ ಕಪಟ.

ಕಟಕ — ದುರ್ಜನರ ಸಹವಾಸದಿಂದ ಅಪವಾದ ಕಾರ್ಯಗಳಲ್ಲಿ ಎಷ್ಟ ನಿಷ್ಕಾರಣ ವ್ಯಯ. ಮಾನಸಿಕ ವ್ಯಥೆ.

ಸಿಂಹ — ಶರೀರ ಸುಖ ಮಾನಸಿಕ ಸುಖಗಳುಂಟು ವ್ಯವಹಾರದಲ್ಲಿ ವಿಜಯ ಮಿತ್ರ ಲಾಭವುಂಟು.

ಕನ್ಯ — ಲಾಭಕ್ಕೆ ತಕ್ಕ ಖರ್ಚು ಮಿತ್ರರ ದರ್ಶನಲಾಭವಸ್ತು ಲಾಭ ವಿದ್ವಾಂಸರ ಸಹವಾಸ ಪರೋಪಕಾರ ಬುದ್ಧಿ.

ತುಲ — ಪ್ರಾಪಂಚಿಕ ಸುಖವಿಲ್ಲ. ನಿದ್ರಾಭಂಗ ಅಗ್ನಿಭಯ. ಅಧಿಕ ವ್ಯಯ ಋಣ ಬಾಧೆಗಳುಂಟು.

ವೃಶ್ಚಿಕ — ಮಾನಸಿಕ ಸುಖವಿಲ್ಲ. ಶತ್ರುಗಳಿಂದ ಹಾನಿ ವ್ಯವಹಾರದಲ್ಲಿ ಅಪಜಯ.

ಧನಸ್ಸು — ಎಲ್ಲಾ ಬಗೆಯ ಸುಖಗಳ ಯೋಗವಿದೆ. ಮಿತ್ರರ ಶತ್ರುಗಳಿಂದ ವೃಥೆ ವ್ಯವಹಾರದಲ್ಲಿ ಅನುಕೂಲ ವ್ಯಯಾಧಿಕ್ಯತೆ.

ಮಕರ — ದೇಹದಲ್ಲಿ ಸ್ವಸ್ಥತೆ ಇರುವದಿಲ್ಲ. ಶರೀರವು ಕೃಶವಾಗಬಹುದು. ಋಣ ಬಾಧೆ ಗುಪ್ತ ವಿಷಯದ ಚಿಂತೆ.

ಕುಂಭ — ಯಾವ ಬಗೆಯ ಸುಖವೂ ಇರುವದಿಲ್ಲ. ಸ್ವಪರ ಜನಗಳಿಂದ ತೊಂದರೆ ವ್ಯವಹಾರದಲ್ಲಿ ಅಸಮಾಧಾನಗಳೇರ್ಪಡುವವು.

ಮೀನ — ಪ್ರಕೃತಿ ಸುಖ ಮಾನಸಿಕ ಸುಖ ಆರ್ಥಿಕ ಸುಖ ಪ್ರಾಪ್ತ. ವ್ಯವಹಾರದಲ್ಲಿ ಜಯ. ನವೀನ ಕಾರ್ಯ ಪ್ರಾರಂಭಯೋಗವುಂಟು

For Quality Printing
L. N. Press
Sriramp et, MYSORE

At Opera

6 ನೇ ವಾರ

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ, ರಾಮಚಂದ್ರ ನಟಿಸಿರುವ

ರಾ ಜ ಕು ಮಾ ರಿ

(ತಮಿಳು)

ವಿ ಟೋ ಫೆ ರಿ ನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು ಭಟ್ಟಿಇಳಿಸಿದ ರಾಗಿ ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ, ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅತ್ಯನುಕೂಲವಾದುದು

"ವಿಟೋಫೆರಿನ್" ಬಾಯಿಲೆ ಒಂದಂತೆ ನೋಡಿಕೊಳ್ಳುವ ಮನೆಯು ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.,
Malleswaram P. O. Bangalore

ಮೈಸೂರು ಸಿಟಿ ಮುನಿಸಿಪಾಲಿಟಿ

ಪ್ರಸಿದ್ಧ ಪತ್ರಿಕೆ

ಇದರಿಂದ ಮೈಸೂರು ಸಿಟಿ ಪುರ ನಿವಾಸಿಗಳಿಗೆ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ವಾಣೀವಿಲಾಸ ನೀರಿನ ಕೇಂದ್ರದಲ್ಲಿ ಅಲ್ಪ ತೊಂದರೆ ಸಂಭವಿಸಿರುವುದರಿಂದ ನಗರಕ್ಕೆ ನೀರಿನ ಸರಬರಾಜು ಮಾಮೂಲಿನಂತೆ ಇರುವುದಿಲ್ಲವಾದ್ದರಿಂದ, ಮಹಾಜನರು ನೀರನ್ನು ಪೋಲು ಮಾಡದೆಯೂ, ನೀರು ಬಂದಾಗ ಮುಂಜಾಗ್ರತೆಯಿಂದ ತಮಗೆ ಬೇಕಾದಷ್ಟು ನೀರನ್ನು ಶೇಖರಿಸಿಟ್ಟುಕೊಳ್ಳಬೇಕೆಂದು ಈ ಮೂಲಕ ಕೋರಿದೆ.

ಮೈಸೂರು
ತಾ || 23—5—47

T. Narasimha Iyengar
ಮೈಸ್ ಪ್ರೆಸಿಡೆಂಟ್.

Edited, Printed and Published by M. S Krishna Rao at the Satyavadi Press Chamaraj Agrahar, Mysore.